Office of the
Director General &
Inspector General of Police,
Karnataka State, Bangalore-1.
5.10.2009

# PRESS NOTE

## Public Affairs Centre to study Police Work Culture

The focus of all police work should be citizens. Karnataka Police has taken many citizen-centric initiatives. The latest is a study of Police work culture by Public Affairs Centre.

Work culture plays a very important role in the organization achieving its objectives. With a view to understanding whether the prevailing work culture of the Karnataka Police Department is conducive to achieving its objective of providing safety and security to the people or not, the DG&IGP, Karnataka, with the approval of the Government of Karnataka has authorized a study of the Police work culture by the Public Affairs Centre (PAC). This study will be based on extensive interviews with both citizens and police officials across the State. The Police department, with the help of Government and the people, is determined to address any problems highlighted by this independent study. It findings would be used to upgrade the performance, accountability and credibility of the Karnataka Police.

The local police station is the focal point for the discharge of the Police functions as far as the people are concerned. Public satisfaction and approval of the functioning of the Police depends a great deal on how well a police station serves the local community. It is not easy, however to judge how well the police stations are serving the public as official records may or may not contain all the relevant information. The treatment meted out to a complainant is known only to that person and his/her experience is unlikely to be noted in any record. Besides, the decentralized nature of police work makes it difficult for higher officials to track the progress of all the cases at each and every police station. This imbalance of information on the performance of the police station and their personnel is an important barrier to the design of proper policy interventions and programmes to improve their functioning.

In order to remedy this gap, it is proposed to undertake an assessment of the delivery of services at the level of police stations through a random sample survey of complainants and police personnel. The survey of complainants will focus on their experience in reporting and/registering and resolving their grievances/problems, and the information they can provide on how they were processed and concluded. This survey will shed much needed light on an area where the department spends a major part of its resources and deploys large numbers of its manpower. Interviews with the police personnel will elicit their views on how well they are able to process and settle the complainants' problems and the difficulties and constraints they face in the course of this work. Once the survey data are analysed and interpreted, it will be possible to identify areas of both weaknesses and strengths in the functioning of the Police. The merit of this approach is that it will be representative of the state as a whole. Since a large sample will be used, it will also permit PAC to compare the performance of the different ranges and Commissionerates. The insights generated through this assessment can thus be an aid to the top policy makers to evolve a strategy to deal with the problems identified and thus improve the department's performance and public image. Anecdotal evidence or casual observations, on the other hand, could be biased and certainly will not be representative.

**The objectives** of the study are as follows:

1. To systematically assess the quality, responsiveness and outcomes of the basic services provided by police stations to the public.

2. To generate a better understanding of the problems and constraints being faced by the police personnel in their role as service provider to the community.

3. To understand the Police work culture and its positive / negative impact on the functioning and delivery of Police services. This will include the study of hierarchy, discipline, inter-personal relationships within the department, recognition, reward and punishment procedures and systems, motivation etc.

4. And, to assist the police department to use the information and knowledge generated through the study so that actionable policies and remedies can be formulated.

Any suggestions by citizens, media persons, serving or retired Police officers and other Government servants in this connection can be sent to the following officers.


| | |
|---|---|
| 1.Sri.Rupak Kumar Dutta, IPS<br>Addl.Director General of Police<br>Lokayukta, M.S. Building,<br>Dr.B.R. Ambedkar Veedhi,<br>Bangalore-560001. | 22353754 (Office)<br>22281470 (Fax)<br>9449022966<br>kla-adg@kar.nic.in |
| 2.Sri.Om Prakash, IPS<br>Addl.Director General of Police,<br>Crime & Technical Services,<br>O/o the DG&IGP,<br>No.2, Nrupathunga Road,<br>Bangalore-560001. | 22212227 (Office)<br>22215911 (Fax)<br>9480800003<br>omprakaships@yahoo.co.in |
| 3.Sri.A.S.N. Murthy, IPS<br>Dy.Inspector General of Police<br>Headquarters-II,<br>O/o the DG&IGP,<br>No.2, Nrupathunga Road,<br>Bangalore-560001. | 22240880 (Office)<br>22215911 (Fax)<br>9449551231<br>asnmcop@yahoo.com |


******

## About Public Affairs Centre

Public Affairs Centre (PAC) is known for its pioneering work on Citizens Report Cards (CRCs) not only in India but also international. PAC has generated or published over 60 reports on various cities and towns in India and more than a dozen in other parts of the world.

Both Government of India and Government of Karnataka have made use of PAC's services to undertake social audits in several departments and sectors.

# <u>ಪತ್ರಿಕಾ ಪ್ರಕಟಣೆ</u>

## ಸಾರ್ವಜನಿಕ ಚಟುವಟಿಕೆಗಳ ಕೇಂದ್ರದಿಂದ ಪೊಲೀಸ್ ಕಾರ್ಯ ವೈಖರಿಯ ಅಧ್ಯಯನ

* * *

ಸಮಗ್ರ ಪೊಲೀಸ್ ಕಾರ್ಯ ಚಟುವಟಿಕೆಗಳಿಗೆ ನಾಗರಿಕರೇ ಕೇಂದ್ರ ಬಿಂದುವಾಗಿರಬೇಕು. ಕರ್ನಾಟಕ ಪೊಲೀಸ್ ಹಲವಾರು ನಾಗರಿಕ ಕೇಂದ್ರಿತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳಲ್ಲಿ ಪೊಲೀಸ್ ಕಾರ್ಯ ವೈಖರಿಯನ್ನು ಅಭ್ಯಸಿಸುವ ಸಾರ್ವಜನಿಕ ಚಟುವಟಿಕೆಗಳ ಕೇಂದ್ರವು ಇತ್ತೀಚಿನದಾಗಿರುತ್ತದೆ.

ಸಂಘಟನೆಯ ಧ್ಯೇಯೋದ್ದೇಶಗಳನ್ನು ಸಾಧಿಸುವಲ್ಲಿ ಕಾರ್ಯ ವೈಖರಿಯು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ಸಾರ್ವಜನಿಕರಿಗೆ ಸುರಕ್ಷತೆ ಮತ್ತು ರಕ್ಷಣೆ ನೀಡುವ ಧ್ಯೇಯೋದ್ದೇಶಗಳನ್ನು ಈಡೇರಿಸುವಲ್ಲಿ ಕರ್ನಾಟಕ ಪೊಲೀಸ್ ಇಲಾಖೆಯ ಪ್ರಸ್ತುತ ಕಾರ್ಯವೈಖರಿಯು ಸಹಾಯಕವಾಗಿದೆಯೇ ಎಂಬುದನ್ನು ಅರಿಯುವ ದೃಷ್ಟಿಯಿಂದ ಡಿಜಿ ಮತ್ತು ಐಜಿಪಿ, ಕರ್ನಾಟಕ ರಾಜ್ಯ ರವರು ಕರ್ನಾಟಕ ಸರ್ಕಾರದ ಅನುಮೋದನೆಯೊಂದಿಗೆ ಪೊಲೀಸ್ ಕಾರ್ಯ ಸಂಸ್ಕೃತಿಯನ್ನು ಅಭ್ಯಸಿಸಲು ಸಾರ್ವಜನಿಕ ಚಟುವಟಿಕೆಗಳ ಕೇಂದ್ರಕ್ಕೆ ಅಧಿಕಾರ ನೀಡಿರುತ್ತಾರೆ. ಕರ್ನಾಟಕ ರಾಜ್ಯಾದ್ಯಾಂತ ನಾಗರಿಕರ ಮತ್ತು ಪೊಲೀಸ್ ಅಧಿಕಾರಿಗಳನ್ನು ವ್ಯಾಪಕವಾಗಿ ಸಂದರ್ಶಿಸುವ ಮುಖಾಂತರ ಇದನ್ನು ಅಧ್ಯಯನ ಮಾಡಬೇಕಾಗಿದೆ. ಪೊಲೀಸ್ ಇಲಾಖೆಯು ಸರ್ಕಾರದ ಮತ್ತು ಸಾರ್ವಜನಿಕರ ಸಹಕಾರದಿಂದ ಪ್ರತ್ಯೇಕ ಅಧ್ಯಯನದ ಮೂಲಕ ಉದ್ಭವಿಸುವ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ಬದ್ಧವಾಗಿದೆ. ಈ ಅಧ್ಯಯನದ ಮೂಲಕ ಹೊರಹೊಮ್ಮುವ ಸಲಹೆಗಳನ್ನು ಕರ್ನಾಟಕ ಪೊಲೀಸ್ ಇಲಾಖೆಯ ಕಾರ್ಯದಕ್ಷತೆಯ ನಿರ್ವಹಣೆ, ಹೊಣೆಗಾರಿಕೆ ಮತ್ತು ವಿಶ್ವಾಸರ್ಹತೆಯನ್ನು ಉನ್ನತೀಕರಿಸಲು ಉಪಯೋಗಿಸಿಕೊಳ್ಳಲಾಗುವುದು.

ಸಾರ್ವಜನಿಕರಿಗೆ ಸಂಬಂಧಪಟ್ಟಂತೆ ಸ್ಥಳೀಯ ಪೊಲೀಸ್ ಠಾಣೆಯು ಪೊಲೀಸರ ಕಾರ್ಯನಿರ್ವಹಣೆಗಳ ಕೇಂದ್ರ ಬಿಂದುವಾಗಿರುತ್ತದೆ. ಪೊಲೀಸ್ ಠಾಣೆಯು ಸ್ಥಳೀಯ ಸಮುದಾಯಕ್ಕೆ ಯಾವ ರೀತಿ ಸೇವೆಯನ್ನು ಸಲ್ಲಿಸುತ್ತದೆ ಎಂಬುದರ ಮೇಲೆ ಪೊಲೀಸ್ ಕಾರ್ಯ ನಿರ್ವಹಣೆಯ ಮೆಚ್ಚುವಿಕೆ ಮತ್ತು ಸಾರ್ವಜನಿಕ ತೃಪ್ತಿಯು ಅವಲಂಬಿತವಾಗಿರುತ್ತದೆ. ಠಾಣಾ ದಾಖಲಾತಿಗಳಲ್ಲಿ ಎಲ್ಲಾ ಮಾಹಿತಿಗಳು ಕೆಲವೊಮ್ಮೆ ಲಭ್ಯವಾಗಬಹುದು ಅಥವಾ ಲಭ್ಯವಾಗದೆ ಇರಬಹುದು, ಆದರೆ ಈ ಆಧಾರದ ಮೇಲೆ ಪೊಲೀಸ್ ಠಾಣೆಗಳು ಸಾರ್ವಜನಿಕರಿಗೆ ಯಾವ ರೀತಿ ಸೇವೆಯನ್ನು ಸಲ್ಲಿಸುತ್ತಿದೆ ಎಂಬುದನ್ನು ತೀರ್ಮಾನಿಸುವುದು ಸುಲಭ ಸಾಧ್ಯವಾಗಿರುವುದಿಲ್ಲ. ಪಿರ್ಯಾದುದಾರರಿಗೆ ಯಾವ ರೀತಿಯ ಸೇವೆ ಲಭ್ಯವಾಯಿತು ಎಂಬುದು ಆತನಿಗೆ ಮಾತ್ರ ತಿಳಿದಿರುತ್ತದೆ ಮತ್ತು ಆತನ/ ಆಕೆಯ ಅನುಭವವನ್ನು ಸಾಮಾನ್ಯವಾಗಿ ಯಾವುದೆ ದಾಖಲಾತಿಗಳಲ್ಲಿ ನಮೂದಿಸಲ್ಪಡುವುದಿಲ್ಲ. ಇದಲ್ಲದೆ ಪೊಲೀಸ್ ಕಾರ್ಯ ಸ್ವರೂಪಗಳನ್ನು ವಿಕೇಂದ್ರಿಕರಿಸಿರುವುದರಿಂದ ಪ್ರತಿಯೊಂದು ಪೊಲೀಸ್ ಠಾಣೆಯ ಎಲ್ಲಾ ಪ್ರಕರಣಗಳ ಪ್ರಗತಿಯನ್ನು ಪರಿವೀಕ್ಷಿಸಲು ಹಿರಿಯ ಅಧಿಕಾರಿಗಳಿಗೆ ಕಷ್ಟವಾಗುತ್ತದೆ. ಈಗಿರುವ ಅಸಮತೋಲನ ಮಾಹಿತಿಯು ಪೊಲೀಸ್ ಕಾರ್ಯ ನಿರ್ವಹಣೆಯನ್ನು ಸುಧಾರಿಸಲು, ಸಮರ್ಪಕ ಕಾರ್ಯಕ್ರಮಗಳನ್ನು ಮತ್ತು ಕಾರ್ಯನೀತಿಯ ವಿಧಾನಗಳನ್ನು ಅಳವಡಿಸಿಕೊಳ್ಳಲು ಪೊಲೀಸ್ ಠಾಣೆ ಮತ್ತು ಅಲ್ಲಿನ ಸಿಬ್ಬಂದಿಗಳ ಕಾರ್ಯನಿರ್ವಹಣೆಗೆ ಅಡಚಣೆಯಾಗಿರುತ್ತದೆ.

ಈ ಒಂದು ಅಂತರವನ್ನು ಪರಿಹರಿಸಲು ಪೊಲೀಸ್ ಸಿಬ್ಬಂದಿ ಮತ್ತು ಪಿರ್‍ಯಾದುದಾರರ ಮಾದರಿ ಸಮೀಕ್ಷೆಗಳ ಮುಖಾಂತರ ಪೊಲೀಸ್ ಠಾಣೆಗಳ ಮಟ್ಟದಲ್ಲಿ ನೀಡುತ್ತಿರುವ ಸೇವೆಯನ್ನು ಯಾವ ರೀತಿ ಒದಗಿಸಲಾಗುತ್ತಿದೆ ಎಂಬುದನ್ನು ನಿರ್ಧರಿಸಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪಿರ್‍ಯಾದುದಾರರು ವರದಿ ಮಾಡುವ, ನೊಂದಾಯಿಸುವ ಮತ್ತು ಕುಂದು ಕೊರತೆ/ ಸಮಸ್ಯೆಗಳನ್ನು ಯಾವ ರೀತಿ ನಿರ್ವಹಿಸಲಾಯಿತು ಮತ್ತು ಅಂತಿಮಗೊಳಿಸಲಾಯಿತು ಎಂಬ ಅನುಭವಗಳ ಹಿನ್ನೆಲೆಯಲ್ಲಿ ದೂರುಗಳ ಸಮೀಕ್ಷೆಯನ್ನು ಮಾಡಲಾಗುವುದು. ಇಲಾಖೆಯು ಮಾನವ ಶಕ್ತಿಯನ್ನು ಅತ್ಯಧಿಕ ಸಂಖ್ಯೆಯಲ್ಲಿ ನಿಯೋಜನೆಯೊಂದಿಗೆ ಸಂಪನ್ಮೂಲಗಳ ಹೆಚ್ಚಿನ ಭಾಗವನ್ನು ವ್ಯಯ ಮಾಡುತ್ತಿದ್ದು ಈ ನಿಟ್ಟಿನಲ್ಲಿ ಸಮೀಕ್ಷೆಯು ಉಪಯುಕ್ತವಾಗಿರುತ್ತದೆ. ಪೊಲೀಸ್ ಸಿಬ್ಬಂದಿಗಳನ್ನು ಸಂದರ್ಶಿಸಿ ಅವರ ಅಭಿಪ್ರಾಯಗಳನ್ನು ಪಡೆದರೆ ಪಿರ್‍ಯಾದುದಾರರ ಸಮಸ್ಯೆಗಳನ್ನು ನಿವಾರಿಸುವ ಪ್ರಕ್ರಿಯೆಯಲ್ಲಿ ಪೊಲೀಸರು ಎದುರಿಸುವ ಸಮಸ್ಯೆಗಳು ಮತ್ತು ಅಡಚಣೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಈ ಸಮೀಕ್ಷಾ ದತ್ತಾಂಶವನ್ನು ವಿಶ್ಲೇಷಿಸಿದಲ್ಲಿ ಮತ್ತು ಅರ್ಥೈಸಿದ್ದಲ್ಲಿ ಪೊಲೀಸ್ ಕಾರ್ಯ ವೈಖರಿಯ ಶಕ್ತಿ ಮತ್ತು ದೌರ್ಬಲ್ಯಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಈ ರೀತಿಯ ದೃಷ್ಟಿಕೋನದ ಮೌಲ್ಯವು ಒಟ್ಟಾರೆಯಾಗಿ ರಾಜ್ಯವನ್ನು ಪ್ರತಿನಿಧಿಸುತ್ತದೆ. ವಿಸ್ತೃತ ಮಾದರಿಗಳನ್ನು ಉಪಯೋಗಿಸುವುದರಿಂದ, ಸಾರ್ವಜನಿಕ ಚಟುವಟಿಕೆಗಳ ಕೇಂದ್ರವು ವಿವಿಧ ವಲಯಗಳು ಮತ್ತು ಕಮೀಷನರೇಟ್‌ಗಳ ಕಾರ್ಯ ನಿರ್ವಹಣೆಗಳನ್ನು ಹೋಲಿಕೆ ಮಾಡಲು ಸಾಧ್ಯವಾಗುತ್ತದೆ. ಈ ರೀತಿಯ ಮೌಲ್ಯಮಾಪನದಲ್ಲಿ ಉದ್ಭವಿಸುವ ಅಂತರದೃಷ್ಟಿಯು ಉನ್ನತ ಕಾರ್ಯನೀತಿ ರಚಿಸುವವರಿಗೆ ಸಹಕಾರಿಯಾಗುವುದಲ್ಲದೆ ಗುರುತಿಸಲ್ಪಟ್ಟ ಸಮಸ್ಯೆಗಳನ್ನು ಪರಿಹರಿಸಲು ಬೇಕಾದ ತಂತ್ರಗಳನ್ನು ರೂಪಿಸುವುದರ ಮೂಲಕ ಇಲಾಖೆಯ ಕಾರ್ಯನಿರ್ವಹಣೆ ಮತ್ತು ಸಾರ್ವಜನಿಕ ಚಿತ್ರಣವು ಸುಧಾರಣೆಯಾಗುತ್ತದೆ. ಸಾಮಾನ್ಯ ವೀಕ್ಷಣೆ ಅಥವಾ ಹಿಂದೆ ನಡೆದ ಘಟನೆಗಳು ಪಕ್ಷಪಾತ ಅಭಿಪ್ರಾಯವಾಗುವುದಲ್ಲದೆ ನಿಶ್ಚಿತವಾಗಿ ಸಾರ್ವಜನಿಕರ ಅಭಿಪ್ರಾಯವನ್ನು ಪ್ರತಿನಿಧಿಸುವುದಿಲ್ಲ.

ಈ ಅಧ್ಯಯನದ ಧ್ಯೇಯೋದ್ದೇಶಗಳು ಕೆಳಕಂಡಂತಿರುತ್ತದೆ:

1. ಪೊಲೀಸ್ ಠಾಣೆಗಳಿಂದ ಸಾರ್ವಜನಿಕರಿಗೆ ಒದಗಿಸುವ ಮೂಲಭೂತ ಸೇವೆಗಳ ಗುಣಮಟ್ಟ, ಸ್ಪಂದನ ಮತ್ತು ಪರಿಣಾಮ ಫಲಿತಾಂಶಗಳನ್ನು ವ್ಯವಸ್ಥಾನುಸಾರವಾಗಿ ವಿಮರ್ಶಿಸುವುದು.

2. ಸಮುದಾಯಕ್ಕೆ ಸೇವೆ ಒದಗಿಸುವ ಕರ್ತವ್ಯದಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ ಎದುರಾಗುವ ಸಮಸ್ಯೆಗಳನ್ನು ಮತ್ತು ಅಡಚಣೆಗಳನ್ನು ಉತ್ತಮವಾಗಿ ಅರ್ಥ ಮಾಡಿಕೊಳ್ಳುವುದು.

3. ಪೊಲೀಸ್ ಕಾರ್ಯ ವೈಖರಿಯಲ್ಲಿನ ಸಕಾರಾತ್ಮಕ ಮತ್ತು ನಕಾರಾತ್ಮಕ ಪರಿಣಾಮಗಳನ್ನು ಅರ್ಥೈಸಿಕೊಂಡು, ಪೊಲೀಸ್ ಸೇವೆಗಳ ನಿರ್ವಹಣೆ ಮತ್ತು ಸೇವೆಗಳನ್ನು ಒದಗಿಸುವುದು. ಇದರಲ್ಲಿ ಇಲಾಖೆಯಲ್ಲಿರುವ ಶ್ರೇಣಿ ವ್ಯವಸ್ಥೆ, ಶಿಸ್ತು, ಅಂತರ್‌ವ್ಯಕ್ತಿಯ ಸಂಬಂಧಗಳು, ಗುರುತಿಸುವಿಕೆ, ಪ್ರಶಂಸೆ ಮತ್ತು ಶಿಕ್ಷೆಗಳ ವಿಧಾನಗಳು ಮತ್ತು ವ್ಯವಸ್ಥೆ, ಪ್ರೇರಣೆ ಇನ್ನಿತರೆಗಳು ಒಳಗೊಂಡಿರುತ್ತವೆ.

4. ಈ ಅಧ್ಯಯನದಿಂದ ಹೊರಹೊಮ್ಮುವ ಮಾಹಿತಿ ಮತ್ತು ಜ್ಞಾನವನ್ನು ಪೊಲೀಸ್ ಇಲಾಖೆಗೆ ನೆರವು ನೀಡಲು ಉಪಯೋಗವಾಗುವುದಲ್ಲದೆ ಕ್ರಿಯಾತ್ಮಕ ಯೋಜನೆಗಳನ್ನು ಮತ್ತು ಪರಿಹಾರೋಪಾಯಗಳನ್ನು ಸಹ ರೂಪಿಸಬಹುದಾಗಿದೆ.

ಈ ಸಂಬಂಧ ನಾಗರಿಕರು, ಮಾಧ್ಯಮ ಪ್ರತಿನಿಧಿಗಳು, ಸೇವಾನಿರತ ಅಥವಾ ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಇತರೆ ಸರ್ಕಾರಿ ನೌಕರರು ಯಾವುದೇ ಸಲಹೆಗಳನ್ನು ಈ ಕೆಳಕಂಡ ಅಧಿಕಾರಿಗಳಿಗೆ ಕಳುಹಿಸಬಹುದಾಗಿದೆ.


1. ಶ್ರೀ ರೂಪಕ್ ಕುಮಾರ್ ದತ್ತ, ಐಪಿಎಸ್.,
   ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
   ಲೋಕಾಯುಕ್ತ, ಎಂ.ಎಸ್.ಬಿಲ್ಡಿಂಗ್,
   ಡಾ: ಬಿ.ಆರ್.ಅಂಬೇಡ್ಕರ್ ವೀಥಿ,
   ಬೆಂಗಳೂರು– 560 001.

   22353754 (ಕಛೇರಿ)
   22281470 (ಫ್ಯಾಕ್ಸ್)
   9449022966
   kla-adg@kar.nic.in

2. ಶ್ರೀ ಓಂಪ್ರಕಾಶ್, ಐಪಿಎಸ್.,
   ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
   ಅಪರಾಧ ಮತ್ತು ತಾಂತ್ರಿಕ ಸೇವೆಗಳು,
   ಡಿಜಿ ಮತ್ತು ಐಜಿಪಿ ರವರ ಕಛೇರಿ,
   ನಂ.2, ನೃಪತುಂಗ ರಸ್ತೆ,
   ಬೆಂಗಳೂರು– 560 001.

   22212227 (ಕಛೇರಿ)
   22215911 (ಫ್ಯಾಕ್ಸ್)
   9480800003
   omprakaships@yahoo.co.in

3. ಶ್ರೀ ಎ.ಎಸ್.ಎನ್.ಮೂರ್ತಿ, ಐಪಿಎಸ್.,
   ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್,
   (ಕೇಂದ್ರಸ್ಥಾನ–2),
   ಡಿಜಿ ಮತ್ತು ಐಜಿಪಿ ರವರ ಕಛೇರಿ,
   ನಂ.2, ನೃಪತುಂಗ ರಸ್ತೆ,
   ಬೆಂಗಳೂರು– 560 001.

   22240880 (ಕಛೇರಿ)
   22215911 (ಫ್ಯಾಕ್ಸ್)
   9449551231
   asnmcop@yahoo.com


* * * * *

## ಸಾರ್ವಜನಿಕ ಚಟುವಟಿಕೆಗಳ ಕೇಂದ್ರದ ಕುರಿತು

ಸಾರ್ವಜನಿಕ ಚಟುವಟಿಕೆಗಳ ಕೇಂದ್ರವು ಭಾರತ ದೇಶವಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ನಾಗರಿಕ ವರದಿಗಳನ್ನು (ಸಿಟಿಜನ್ಸ್ ರಿಪೋರ್ಟ್ ಕಾರ್ಡ್) ಸಿದ್ದಪಡಿಸುವುದರಲ್ಲಿ ಅತ್ಯುತ್ತಮ ಕಾರ್ಯಾಚರಣೆಗೆ ಹೆಸರಾಗಿರುತ್ತದೆ. ಈ ಕೇಂದ್ರವು ಪ್ರಪಂಚದ ಇತರ ಭಾಗಗಳಲ್ಲಿ ಹನ್ನೆರಡಕ್ಕೂ ಮಿಗಿಲಾಗಿ ಮತ್ತು ಭಾರತ ದೇಶದ ಹಲವಾರು ನಗರ ಮತ್ತು ಪಟ್ಟಣಗಳ ಬಗ್ಗೆ 60 ವರದಿಗಳನ್ನು ಸಿದ್ದಪಡಿಸಿರುತ್ತಾರೆ/ ಪ್ರಕಟಿಸಿರುತ್ತಾರೆ.

ಭಾರತ ಸರ್ಕಾರವು ಮತ್ತು ಕರ್ನಾಟಕ ಸರ್ಕಾರವು ಹಲವಾರು ಇಲಾಖೆ ಮತ್ತು ಕ್ಷೇತ್ರಗಳ ಸಾಮಾಜಿಕ ಪರಿಶೋಧ ಕಾರ್ಯಗಳಲ್ಲಿ ಸಾರ್ವಜನಿಕ ಚಟುವಟಿಕೆಗಳ ಕೇಂದ್ರದ ಸೇವೆಯನ್ನು ಉಪಯೋಗಿಸಿಕೊಂಡಿರುತ್ತದೆ.